# ದಾವಣಗೆರೆ ಜಿಲ್ಲೆಯ ಜಾತ್ರೆಗಳು ಮತ್ತು ಆಧುನೀಕರಣ: ಒಂದು ಅಧ್ಯಯನ

**ಶ್ರೀ ಹಿರೇಮಠ I.S**
**ಸಂಶೋಧಕರು**
ಕನ್ನಡ ಅಧ್ಯಯನ ವಿಭಾಗ
ದ್ರಾವಿಡಿಯನ್ ವಿಶ್ವವಿದ್ಯಾಲಯ ಶ್ರೀನಿವಾಸವನಮ್: ಕುಪ್ಪಾಮ
**ಡಾ. ಕೆ. ಶಾರದಾ**
**ಪ್ರಾಧ್ಯಾಪಕರು**
ಕನ್ನಡ ಅಧ್ಯಯನ ವಿಭಾಗ
ದ್ರಾವಿಡಿಯನ್ ವಿಶ್ವವಿದ್ಯಾಲಯ
ಕುಪ್ಪಾಮ, ಚಿತ್ತೂರು (ಜಿಲ್ಲೆ)

**ಸಾರಾಂಶ**

ಪ್ರಸ್ತುತ ಅಧ್ಯಯನವು **"ದಾವಣಗೆರೆ ಜಿಲ್ಲೆಯ ಜಾತ್ರೆಗಳು ಮತ್ತು ಆಧುನೀಕರಣ"** ಜಾತ್ರೆಗಳಲ್ಲಿ ಆಧುನೀಕತೆ ವ್ಯಾಪಕವಾಗುತ್ತಿದ್ದು ಇಂದು ಕುಡಿತ ಕುಣಿತ, ಜೋಜು ಮೋಜು ಹೆಚ್ಚಾಗುತ್ತಿದೆ. ನೈಜ ಬರುಬರುತ್ತಾ ಚಕ್ಕಡಿ, ಸೈಕಲ್ ಎಲ್ಲವೂ ಮಾಯವಾಗುತ್ತಾ ಇಂದು ದ್ವಿಚಕ್ರ, ತ್ರಿಚಕ್ರ ವಾಹನ ಮೋಟಾರ್ ವಾಹನಗಳು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸುವ ಭಕ್ತರಿಗೆ ಒಂದೇ ದಿನದಲ್ಲಿ ಓಡಾಡಲು ಸಾಕಷ್ಟು ಅನುಕೂಲವಿದ್ದು ಬೆಳಿಗ್ಗೆ ಸಾಯಂಕಾಲದೊಳಿಗೆ ಜಾತ್ರೆ ಪೂರೈಸುತ್ತಾರೆ. ವಾರ–ದಿನಗಟ್ಟಲೆ ಪ್ರಯಾಣ ಈಗ ಕೇವಲ ಗಂಟೆಗಳಿಗೆ ಸೀಮಿತವಾಗಿದೆ. ಜಾತ್ರೆಗಳಲ್ಲಿ ಅನೇಕ ಸಿದ್ದ ಉಡುಪುಗಳ, ಸಿದ್ಧವಸ್ತುಗಳ ಕೊಂಡುಕೊಳ್ಳುವಿಕೆ ಸಾಮಾನ್ಯ ಎನಿಸುತ್ತಿದ್ದು ಹಲವು ಹತ್ತು ರೀತಿಯ ಮಕ್ಕಳ ಆಟಿಕೆಗಳಲ್ಲಿ ಸಾಕಷ್ಟು ಹೊಸತನೆ ಕಂಡುಬರುತ್ತಿದೆ. ಅಲಂಕಾರಿಕೆ ಗೃಹೋಪಯೋಗಿ ಬಳಕೆಗೆ ಸಾಮಾಗ್ರಿಗಳನ್ನು ಖರೀದಿಸುವ ಭರದ ವ್ಯಾಪಾರ ಭಕ್ತಿ ಇಲ್ಲದಿದ್ದರೂ ಹಣ ಇರಲೇಬೇಕು ಎಂಬುದನ್ನು ಸಾರುತ್ತದೆ. ಅನೇಕ ಬೇಕರಿ ತಿಂಡಿ, ತಿನಿಸುಗಳು ಬಾಟಲಿ ನೀರು ಮೊದಲಾದ ಸಿದ್ಧವಾದ ತಿನಿಸುಗಳು ಎಲ್ಲಕ್ಕೂ ಹೊಸತನ ಕಾಣುತ್ತೇವೆ. ಕೆಲವೊಮ್ಮೆ ಅಸಲಿ ನಕಲಿ ಗುರುತಿಸುವುದು ತೀರ ಕಷ್ಟವಾಗುವಂತೆ ಮಾರುಕಟ್ಟೆಯ ಹಾವಳಿ ಜಾತ್ರೆಯಲ್ಲಿರುತ್ತದೆ.

**ಪ್ರಮುಖ ಪದಗಳು: ಜಾತ್ರೆಗಳು ಮತ್ತು ಆಧುನೀಕರಣ**

**ಪೀಠಿಕೆ**

ಜಾತ್ರೆಗಳು ಆಧುನೀಕರಣದ ಸೋಂಕಿಗೆ ಒಳಗಾಗಿದ್ದು, ಕಾಲಮಾನಕ್ಕೆ ತಕ್ಕಂತಹ ಬದಲಾವಣೆಯ ಹೊಸ್ತಿಲನ್ನು ದಾಟುತ್ತಿವೆ. ಹೊಸ ಹಾಗು ಚಲನಶೀಲತೆಗೆ ತಕ್ಕ ಸ್ಥಾನಿಕ ಸ್ಥಿತ್ಯಂತರವನ್ನು ಪಡೆದುಕೊಳ್ಳುತ್ತಿದ್ದು, ಸಾಂಪ್ರದಾಯಿಕ ಆಚರಣೆಗಳು ಕಾಲ ಕಳೆದಂತೆ ವ್ಯತ್ಯಾಸವಾಗುತ್ತಾ ಸಂಪೂರ್ಣ ಬದಲಾವಣೆ ಆಗುತ್ತಿರುವುದನ್ನು ಜಾತ್ರೆಗಳಲ್ಲಿ ಕಾಣುತ್ತೇವೆ. "ಹಿಂದೆ ರಂಗವಲ್ಲಿ ಹಾಕುತ್ತಿದ್ದ ಸಂದರ್ಭಗಳಲ್ಲಿ ಈಗ ಅನೇಕ ಬಣ್ಣ ಬಣ್ಣಗಳು ಮಿಂಚಿರುತ್ತವೆ. ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ತಲುಪುವ ಕಾಲ ಈಗ ಅನಿವಾರ್ಯವಾಗಿದ್ದು, ಆಧುನಿಕತೆಯು ನಮ್ಮ ಸಾಂಸ್ಕೃತಿಕ ಪರಿಸರವನ್ನು ಸಂಬಂಧವನ್ನು ಶಿಥಿಲಗೊಳಿಸಿ ಅನೇಕ ಆಚಾರ ವಿಚಾರಗಳು ಕಳೆದುಹೋಗುತ್ತವೆ. ಕೇವಲ ಪಟ್ಟಣಗಳಷ್ಟೆ ಅಲ್ಲ ಹಳ್ಳಿಗಳಲ್ಲಿ ಇದರ ಮುಖ ತೋರಿಸಿದೆ." ನಾಗರೀಕತೆಯ ಪ್ರಭಾವದಿಂದಾಗಿ ನಮ್ಮ ಜಾನಪದ ಸೊಗಡು ಕಳೆದುಕೊಳ್ಳುತ್ತಿರುವುದು ವಿಷಾದಕರವಾಗಿದೆ. ಇಂತಹ ದಟ್ಟ ಪ್ರಭಾವದಿಂದ ಜಾತ್ರೆಗಳೂ ಹೊರತಾಗಿಲ್ಲ.

**ದೇವಾಲಯಗಳಲ್ಲಿ ಆಧುನೀಕತೆ**

ಈ ಹಿಂದೆ ಇದ್ದ ಚಿಕ್ಕ ಗುಡಿಗಳು ಕಣ್ಮರೆಯಾಗುತ್ತಿದ್ದು, ಹಲವು ಬಾರಿ ಪುನರ್ ನಿರಾಣಗೊಳ್ಳುತ್ತಿದ್ದು, ಅನೇಕ ಬದಲಾವಣೆಗಳೊಂದಿಗೆ ವ್ಯವಸ್ಥಿತ ಕಲ್ಯಾಣ ಮಂಟಪಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಗೋಪುರಗಳು ಭಕ್ತಾದಿಗಳ ದೇಣಿಗೆಯ ಪಟ್ಟಿಯಿಂದ ಸುಣ್ಣ ಬಣ್ಣಗಳು ಬದಲಾಗುತ್ತಿದ್ದು ಹಳೆಯ ಪರಿಕರಗಳೆಲ್ಲಾ ಮೂಲೆ ಗುಂಪಾಗುತ್ತಿದ್ದು, ಅಲ್ಲಿ ಹೊಸತನ ತಾಂಡವಾಡುತ್ತಿದೆ. ಕೆಲ ದೇವಾಲಯಗಳು ಮುಜರಾಯಿ ಇಲಾಖೆ ಹಿಡಿತದಲ್ಲಿ ಮತ್ತಷ್ಟು ಬಿಗಿಗೊಳ್ಳುತ್ತವೆ. ಇನ್ನು ಕೆಲವು ದೇವಾಲಯಗಳು ಮೇಲ್ವರ್ಗದ ದೇವಾಲಯಗಳೂ ಹೆಚ್ಚು ಸಂಸ್ಕೃತದ ಛಾಯೆಯಿಂದ ದೂರವಾಗದೆ ಉಳಿದಿವೆ. ಒಟ್ಟಾರೆ ಆಧುನಿಕ ದೇವಾಲಯ ನಿಲ್ದಾಣದಲ್ಲಿ, ಸಾಮೂಹಿಕ ವಿವಾಹ ನಡೆಯುವ ಅನುಕೂಲಕ್ಕೆ ತಕ್ಕಂತೆ ಬದಲಾವಣೆಯಾಗುತ್ತಿದ್ದು, ಪುರೋಹಿತಶಾಹಿ ವ್ಯವಸ್ಥೆ ನುಸುಳುತ್ತಿದ್ದು ಪ್ರತಿಯೊಂದು ಹಂತದಲ್ಲಿ ಅಂದಿನ ಕಟ್ಟಿಗೆ–ಕಲ್ಲಿನ ಸಾಮಾನ್ಯ ದೇವರ ವಿಗ್ರಹಗಳು ಆಧುನಿಕ ರೂಪ ಪಡೆಯುತ್ತಿವೆ. ಅಲ್ಲಿನ ವಾದ್ಯ ಮೊಳಗುವುದು ವಿದ್ಯುತ್ ಚಾಲಿತ ಯಂತ್ರೋಪಕರಣಗಳಿಂದಾಗಿ ಎಂಬುದನ್ನು ದಕ್ಷಿಣೆ–ಹರಕೆಗಳ ಪಾವತಿಗೆ ಕಂಪ್ಯೂಟರೀಕಣ ಬಿಲ್ಲು ನೀಡುವಿಕೆಯನ್ನು ಪ್ರತಿಯೊಂದರಲ್ಲೂ ಸಾಲಾಗಿ ನಿಲ್ಲುವ ವ್ಯವಸ್ಥೆಯನ್ನು ಗಮನಿಸಬಹುದು.

**ರಥಗಳ ಆಧುನಿಕತೆ**

ಕೆಲವಡೆ ರಥಗಳಿಗೆ ವಿದ್ಯುತ್ ಚಾಲಿತ ಯಂತ್ರಗಳನ್ನು ಜೋಡಿಸುವ ಪ್ರಯತ್ನ ನಡೆದರೆ ಕೆಲವಡೆಗಳಲ್ಲಿ ಆಧುನಿಕ ಟೈರ್ ಗಾಲಿಗಳ ಜೋಡಣೆ ಮಾಡಿರುವುದು ಕಾಣುತ್ತೇವೆ. ಇನ್ನು ಕೆಲವೆಡೆ ಚಿಕ್ಕ ರಥಗಳು ಶ್ರೀಗಂಧ–ಹೊನ್ನೆ ಮತ್ತಿ ಮರದ ರಥಗಳು ದೇವಾಲಯಗಳ ಒಳಗೆ ಎಲ್ಲೋ ಮೂಲೆಯಲ್ಲಿ ನಿಲ್ಲಿಸುವುದು ಹಾಗೂ ಕೆಲವಡೆ ಹೊಸ ರಥಗಳ ನಿರ್ಮಾಣ ಹುರುಪಿನಿಂದ ನಡೆಯುತ್ತಿರುವುದು ಕಂಡುಬರುತ್ತದೆ. ಹಾಗೂ ಉಚ್ಚಾಯಗಳು ನವೀಕರಣಗೊಳ್ಳುತ್ತಿದ್ದು, ಕಲ್ಲಿನ ಗಾಲಿಗಳು ಕಣ್ಮರೆಯಾಗಿ ಕಟ್ಟಿಗೆ ಕಬ್ಬಿಣದ ಚಕ್ರಗಳು ಉರುಳುತ್ತವೆ. "ರಥಗಳ ಅಲಂಕಾರ ಶೈಲಿಗಳೂ ಅಂತಸ್ತಿನ ನಿರ್ಮಾಣ ರಥಗಳು ಚಲಿಸುವ ದಿಕ್ಕುಗಳು ಹೀಗೆ ನಾನಾರೀತಿಯ ರಥ ನಿರ್ಮಾಣದಲ್ಲಿ ಆಧುನೀಕತೆ ಕಾಣುತ್ತೇವೆ.” ಚಿಕ್ಕ ರಥಗಳು ದೇವಾಲಯದ ಒಳ ಆವರಣಗಳಲ್ಲಿ ನಡೆದರೆ ದೊಡ್ಡ ರಥಗಳಿಗೆ ಗೊತ್ತು ಪಡಿಸಿದ ರಾಜ ಬೀದಿಗಳಲ್ಲಿ ಚಾಲನೆ ಸಿಗುತ್ತದೆ. ಇಂದು ಕೆಲವೆಡೆ ಹೊಟ್ಟೆಪಾಡಿಗಾಗಿ ಬೇಡುವವರು ಶನಿ ದೇವರ ಸಂಚಾರಿ ದೇವಾಲಯವನ್ನು ಕುದುರೆ ಟಾಂಗ ಇಲ್ಲವೆ ಎತ್ತಿನ ಗಾಡಿಯಲ್ಲಿ, ಓಣಿ ಓಣಿಗಳಲ್ಲಿ ಸಂಚರಿಸುವುದನ್ನು ಇಂದು ಅಲ್ಲಲ್ಲಿ ಕಾಣುತ್ತೇವೆ. ಇನ್ನೊಂದು ಅಂಶವೆಂದರೆ ರಥಗಳಲ್ಲಿ ಬೆಳ್ಳಿ ಬಂಗಾರ ಲೇಪನಗಳು ಉಂಟು. ನಮ್ಮ ಧನ ಸಂಪತ್ತಿನ ಸಂಕೇತವಾಗಿ ಈ ರೀತಿಯ ಬೆಳ್ಳಿ ಬಂಗಾರದ ನೈಜತೆ ಹಾಗೂ ಲೇಪನವು ಕೆಲವಡೆ ಗೋಚಾರವಾಗುತ್ತಿದೆ. ಹರಕೆ ಮಾಡಿಕೊಂಡ ಭಕ್ತರು ರಥಕ್ಕೆ ಶೃಂಗಾರ ನೀಡುವ ಕೇಸರಿ, ಬಿಳಿ, ಹಸಿರಿನ ದೊಡ್ಡ ಹೂಮಾಲೆ ಅರ್ಪಿಸಿ ಬಾವುಟಗಳಲ್ಲಿ ಕನ್ನಡತನದ ಕೇಸರಿ ಹಾಗೂ ಇತರೆ ಬಣ್ಣಗಳಲ್ಲೂ ಆಧುನಿಕತೆ ಮೆರೆಸುತ್ತೇವೆ.

**ಆಚರಣೆಗಳಲ್ಲಿ ಆಧುನಿಕತೆ**

ಇಂದು ಸಾಕಷ್ಟು ಪರಿವರ್ತನೆಗಳು ಜಾತ್ರೆಗಳಲ್ಲಿ ಕಂಡು ಬರುತ್ತಿದ್ದು ಮೊದಲಿನಂತೆ ಮೌಢ್ಯತೆ ಈಗ ದೂರವಾಗುತ್ತಿದೆ. ತಲೆಗೂದಲನ್ನು ತೆಗೆಸುವ ಭಕ್ತರು ಈಗ ಎಲ್ಲೋ ನಾಲ್ಕು ಕೂದಲನ್ನು ಕತ್ತರಿಸಿಕೊಳ್ಳುತ್ತಾರೆ. ಇಡೀ ತಲೆಯನ್ನು ಕೇಶಮುಂಡನ ಮಾಡಿಸಿಕೊಳ್ಳದೇ ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳುವುದುಂಟು. ಸರ್ಕಾರವೇ ಸಂಪೂರ್ಣ ನಿಷೇಧಿಸಿರುವ ಬೆತ್ತಲೆ ಸೇವೆ ಸಂಪೂರ್ಣ ಬದಲಾವಣೆಗೊಂಡು ಕೇವಲ ಬೇವಿನ ಸೊಪ್ಪು ಉಡುಗೆ ಧರಿಸುವ ಅಥವಾ ಒಳಉಡುಪುಗಳೊಂದಿಗೆ ನಡೆಯುತ್ತಿದೆ. ಲೆಕ್ಕಿ ಸೊಪ್ಪು–ಬೇವಿನ ಸೊಪ್ಪು ಮೊದಲಾದವನ್ನು ಬಹಳವಾಗಿ ಬಳಸುವುದು ಕಂಡುಬರುತ್ತದೆ. ಅಲ್ಲದೆ ದಿನವಿಡೀ ನಡೆಯುವ ಆಚರಣೆಗಳು ಕೆಲವೇ ಗಂಟೆಗೆ ಸೀಮಿತ ಆಗಿರುವುದುಂಟು. ಇನ್ನು ಪ್ರಾಣಿ ಬಲಿಯಂತೂ ದೊಡ್ಡ ಕೋಣಗಳನ್ನು ಕಡಿಯುವುದಕ್ಕೆ ಸರ್ಕಾರ ಅಡ್ಡಿಪಡಿಸಿದ್ದರೂ (ಅಲ್ಲಲ್ಲಿ ಸಿ.ಸಿ.ಟಿವಿ, ಕ್ಯಾಮರ ಅಳವಡಿಸಿ ಸೂಕ್ತ ಬಂದೋ

ಬಸ್ತ್ ಮಾಡಿರುತ್ತಾರೆ) ಕೆಲವೊಮ್ಮೆ ಪ್ರೊಲೀಸರ ಕಣ್ಣಪ್ಪಿಸಿ ಕಡಿಯುವುದು ಕಂಡುಬರುತ್ತದೆ. ಅಥವಾ ಡಮ್ಮಿ ಕೋಣವನ್ನು ಕಡಿಯುವುದು, ಹೀಗೆ ನಾನಾ ಪ್ರಯತ್ನಗಳನ್ನು ಕೈ ಬಿಟ್ಟು ಪರಿವರ್ತನೆಯಾ ರೂಪದಲ್ಲಿ ಸಿರೆಂಜಿನಿಂದ ರಕ್ತ ಪಡೆದು ದೇವತೆಗೆ ಸ್ನೇ ಮಾಡುವುದುಂಟು. "ಇತ್ತೀಚಿಗೆ ಪಾರ ಕೋಳಿಯನ್ನ ಬಲಿನೀಡುತ್ತಾರೆ. ಅದೇ ರೀತಿ ಗುಟ್ಟಾಗಿ ಮುತ್ತು ಕಟ್ಟಿಸಿಕೊಂಡು ದೇವದಾಸಿ ಆಗ ಬಯಸುವ ಮಹಿಳೆಯರ ಪ್ರಯತ್ನವನ್ನು ಅನೇಕ ಮಹಿಳಾ ಸಂಘಟನೆಗಳು, ಸಮೂಹ ಮಾಧ್ಯಮದವರು, ಸಾರ್ವಜನಿಕರು ವಿರೋಧಿಸಿದ್ದಾರೆ. ಸರ್ಕಾರ ದೇವದಾಸಿಯಾಗುವುದನ್ನು ಸಂಪೂರ್ಣ ನಿಷೇಧಿಸಿದೆ."

ಈ ಹಿನ್ನೆಲೆಯಲ್ಲಿ ಜೋಗತಿಯರ ಸಂಖ್ಯೆ ಕಡಿಮೆಮಾಡಲು ಕಾನೂನಿನ ರೀತ್ಯ ಇಂತಹ ಅನಿಷ್ಟ ಪದ್ಧತಿ ನಿವಾರಿಸಲು ಸರ್ಕಾರ ಪ್ರಯತ್ನ ಮಾಡಿದರೂ ಪುನರ್ವಸತಿ ಕಲ್ಪಿಸಿದರೂ ಸರ್ಕಾರದ ಸೌಲಭ್ಯಗಳಿಗಾಗಿ ಗುಟ್ಟಾಗಿ ಮುತ್ತು ಕಟ್ಟಿಸಿಕೊಳ್ಳುವವರೂ ಇದ್ದಾರೆ. ಮುದ್ರೆ ಹಾಕಿಸಿಕೊಳ್ಳುವ ಜೋಗಪ್ಪ, ದ್ವಾರಪ್ಪ–ದಾಸಪ್ಪಗಳ ಸಂಖ್ಯೆ ಈಗ ಗಣನೀಯವಾಗಿ ಕಡಿಮೆಯಾಗಿದೆ. ಇವರು ಕಾಯಕ ಎಂಬ ಹೆಸರಿನಲ್ಲಿ ಭಿಕ್ಷಾಟನೆ ಮಾಡಲು ಪ್ರಯತಿಸುತ್ತಿದ್ದು ಇವರನ್ನು ಪುನರ್ ವಸತಿ ಕೇಂದ್ರಗಳಿಗೆ ಸಾಗಿಸುವುದುಂಟು.

**ನಂಬಿಕೆ, ಜೀವನ ಆಧುನಿಕತೆ**

ಇಂದು ದೇವರು ಕಷ್ಟ ಪರಿಹರಿಸುತ್ತಾನೆಂಬ ನಂಬಿಕೆ ಈಗ ಇಲ್ಲದಂತಾಗಿ ತನಗೆ ತಾನೇ ಎಂಬ ಜವಬ್ದಾರಿ. ಹೊಣೆಗಾರಿಕೆ ಹೆಚ್ಚಾಗುತ್ತಿದ್ದು ತನ್ನ ಕಷ್ಟಗಳಿಗೆ ತಾನೇ ಪರಿಹಾರ ಕೈಗೊಳ್ಳಬೇಕಾಗಿದೆ. ಅದೇರೀತಿ ನಮ್ಮಲ್ಲಿ ನಂಬಿಕೆ ಆಚರಣೆಗಳು ಅನೇಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಹಿಂದಿನ ಜನರ ನಂಬಿಕೆ ಹಾಗೂ ಇಂದಿನ ಯುವಕರ ನಂಬಿಕೆಗೆ ಸಾಕಷ್ಟು ವ್ಯತ್ಯಾಸಗಳಿದ್ದು ಯುವ ಜನತೆ ಈಗ ದೇವರನ್ನೇ ನಂಬುತ್ತಿಲ್ಲ ಎನ್ನಬಹುದು. ನಂಬಿದರೂ ಅಷ್ಟಕಷ್ಟೆ, ಸಂಕಟ ಬಂದಾಗ ಮಾತ್ರ ಎಂಬುದನ್ನು ನೋಡುತ್ತೇವೆ. ಸಾಂಪ್ರದಾಯಿಕವಾಗಿ ನಡೆಯುವ ಅಭಿಷೇಕ ಪೂಜೆ ಮೊದಲಾದ ಪೂಜಾ–ವಿಧಿ ವಿಧಾನಗಳು ಇತ್ತೀಚಿಗೆ ಕಡಿಮೆಯಾಗುತ್ತಲೇ, ಯಾಂತ್ರಿಕವಾಗುತ್ತ ನೀರಸಗೊಂಡಿವೆ. ಇಂದು ಮೌಲ್ಯಗಳು ಬದಲಾಗುತ್ತಿದ್ದು ಹಿರಿಯರ–ಹಿಂದಿನ ಮೌಲ್ಯಗಳನ್ನು ಅಳವಡಿಸಿ ಕೊಳ್ಳುವುದು ದುಸ್ತರವೆನಿಸುವುದು. ಹಿಂದಿನ ಮುಗ್ಧಭಕ್ತಿ, ಅಂತಹ ಮುಗ್ಧ ಜನತೆ ಈಗಿಲ್ಲ. "ಹಿಂದೆ ಭಯಾನಕ ರೋಗಗಳಾದ ಸಿಡುಬು, ದಡಾರಗಳು, ವಾಂತಿ ಬೇಧಿ ಯಂತಹ, ಗುದ್ದವನ ಬೇನೆಯಂತಹ ಭಯಂಕರ ಕಾಯಿಲೆಗಳು ಈಗ ಬೇರೆ ಸ್ವರೂಪ ಪಡೆದುಕೊಂಡಿವೆ. ನಮ್ಮ ಊರಿನ ಗಡಿ ಒಳಗೆ ಇಂತಹ ಖಾಯಿಲೆಗಳು ಬಂದದ್ದು, ಅವನ್ನು ಒಂದು ದೇವತೆಯ ಹೆಸರಿನಲ್ಲಿ ಗಡಿಮಾರಮ್ಮನಿಗೆ ಪೂಜೆ ಮಾಡಿ ನೈವೇದ್ಯ ಕೊಟು ನಮ್ಮ ಗಡಿಯಿಂದ ಸಣ್ಣ ರಥದಲ್ಲಿ ಕುಳ್ಳಿರಿಸಿ ಎಳೆದೊಯ್ದು ಬಿಡುತ್ತಿದ್ದ ಜನತೆ ಈಗ ರೋಗ ರುಜಿನಕ್ಕೆ ಹೆದರದೆ ವೈದ್ಯರ ಬಳಿ ಹೋಗುತ್ತಿದ್ದಾರೆ." ನಾಗರೀಕ ಜೀವನದಿಂದ ನಮ್ಮ ವೈಚಾರಿಕ ಪ್ರಜ್ಞೆ ಜಾಗೃತಗೊಳ್ಳುತ್ತಿದ್ದು ನಗರಗಳ ಪ್ರಭಾವ ಹೆಚ್ಚಿಗುತ್ತಿದೆ. ಇಲ್ಲಿ ಮನುಷ್ಯನಿಗೆ ಹಣ ಮುಖ್ಯವಾಗಿ, ದೇವರಕಲ್ಪನೆ ಕ್ರಮೇಣ ಕಡಿಮೆಯಾಗುತ್ತಿದ್ದು ಗ್ರಾಮದೇವತೆ ಶಿಷ್ಟ ದೇವತೆಗಳ ನಂಬಿಕೆ ಕುಸಿಯುತ್ತಿದೆ. ಕಾಟಾಚಾರಕ್ಕೆ ಪೂಜೆ ಪುನಸ್ಕಾರ ಮಾಡುತ್ತಿದ್ದು ಧಾರ್ಮಿಕ ನಂಬಿಕೆಗಳು ಶಿಥಿಲಗೊಳ್ಳುತ್ತಿರುವುದು ಕಂಡುಬರುತ್ತದೆ. ಹೀಗಿರುವಾಗ ಜಾತ್ರೆಗಳಿಗೆ ಕಳೆ ಬರುವುದು ಹೇಗೆ? ಜಾತ್ರೆಗಳಲ್ಲಿ ಸಿಗುತ್ತಿದ್ದ ಎಲ್ಲಾ ವಸ್ತುಗಳು ಈಗ ನಗರದ ಮಾರುಕಟ್ಟೆಗಳಲ್ಲಿ ಲಭ್ಯವಾಗುತ್ತಿವೆ. ಸಂಚಾರಿ ವ್ಯಾಪಾರಿಗಳಿಂದ ಆಗಾಗ ಸ್ಥಳಿಯವಾಗಿ ಪೂರೈಕೆ ಯಾಗುವ ಇಂತಹ ಅನೇಕ ವ್ಯವಹಾರಿಕ ಉದ್ದೇಶಗಳ ಈಡೇರಿಕೆಗೆ ಜಾತ್ರೆಯವರೆಗೂ ಕಾಯಬೇಕೆ? ಎಂದು ಮೂಗು ಮುರಿಯುತ್ತಾರೆ. ಏಕೆಂದರೆ ಒಂದು ವಸ್ತುವನ್ನು ಕೊಂಡರೆ ಮತ್ತೊಂದು ಉಚಿತ ಎಂಬ ಭಾರೀ ಘೋಷಣೆಯು ಕಾರಣವಾಗಿದ್ದು ಜಾತ್ರೆಗಳಲ್ಲಿ ಇಂತಹ ರಿಯಾಯಿತಿ ಸಿಗಲಾರದು.

**ಸಿಡಿ ಆಡುವ ಕ್ರಮ**

ಸಿಡಿ ಆಡುವುದು ಒಂದು ರೋಚಕ ಘಟನೆ ಹಿಂದೆ ಬೆನ್ನಿಗೆ ಕಬ್ಬಿಣದ ಸಲಾಕೆಯಂತಹ ಕೊಂಡಿಯನ್ನು ಚುಚ್ಚಿಕೊಂಡು ಸಿಡಿ ಆಡುತ್ತಿದ್ದರೆ ಈಗ ಸೊಂಟಕ್ಕೆ ಬೆನ್ನಿಗೆ ಬಟ್ಟೆ ಸುತ್ತಿಕೊಂಡು ಈ ನೇಮ ಸಡಿಲಿಸುತ್ತಾರೆ. "ಮನೆಯಿಂದ, ನದಿ–ಹಳ್ಳ ಕೊಳ್ಳಗಳಿಂದ ದಿಂಡುಕೊಳ್ಳುವಿಕೆ ಕೈ ಬಿಟ್ಟು ಈಗ ಕೇವಲ ದೇವಾಲಯದ ಸುತ್ತ 2–3 ಸುತ್ತು ಪ್ರದಕ್ಷಿಣೆಗೈಯುವುದುಂಟು. ದೇವರಿಗೆ ಈ ಹಿಂದೆ ನೀಡುತ್ತಿದ್ದ ಬಲಿ ಅನ್ನಆಹಾರಗಳ ಸಮರ್ಪಣೆ ಕಡಿಮೆಯಾಗುತ್ತಿದೆ. ಅದೇರೀತಿ ಚಿನ್ನ ಬೆಳ್ಳಿ ಲೋಹಗಳು ನೀಡುವುದು ಕಡಿಮೆಯಾಗುತ್ತಿದೆ. ಈಗ ಕೇವಲ ಚಿನ್ನ–ಬೆಳ್ಳಿ ಮೊದಲಾದ ಲೋಹಗಳು ಸಣ್ಣ ಪ್ರಮಾಣದಲ್ಲಿ ನೀಡಲಾಗುತ್ತಿದೆ. ಅಥವಾ ರೆಡಿಮೇಡ್ ಬೆಳ್ಳಿ ಕಣ್ಣು–ಕೋರೆಮೀಸೆ ಮೊದಲಾಗಿ ನೀಡಿ ರಸೀದಿ ಪಡೆಯುತ್ತಾರೆ." ಅಂದು ಆತ್ಮಸಾಕ್ಷಿ ಭಕ್ತನಿಗಿದ್ದರೆ ಈಗ ಇಂತಹ ರಸೀದಿ ಸಾಕ್ಷಿ ಆಗುತ್ತದೆ. ದೇವರು ಕಷ್ಟ ಪರಿಹರಿಸುತ್ತಾನೆಂಬ ನಂಬಿಕೆಗಳು ಈಗ ಕಣ್ಮರೆಯಾಗಿದ್ದು ಭಕ್ತಿಯಲ್ಲೂ ಅಂತಹ ಶಕ್ತಿ ಉಳಿದಿಲ್ಲ. ಈ ಹಿಂದೆ ಗ್ಯಾಸ್ ಹೊರುತ್ತಿದ್ದವರು ಈಗ ಗ್ಯಾಸ್ ಹೊರುತ್ತಿಲ್ಲ. ಮಡಿವಾಳರು ಮಡಿಬಟ್ಟೆ ಹಾಸುವುದು ಇತ್ತೀಚಿಗೆ ಕಡಿಮೆ ಆಗಿದೆ. ಅಮ್ಮಂದಿರು ಈಗ ಪುರುಷದೈವಗಳ ಹೆಸರನ್ನು ಬದಲಾಯಿಸಿ ಕೊಳ್ಳುತ್ತಿದ್ದು ಮೂಕಮ್ಮ–ಮೂಕೇಶ್ವರಿ ಚೌಡಮ್ಮ–ಚೌಡೇಶ್ವರಿ, ಮೊದಲಾಗಿ ಬದಲಾಗುತ್ತಿವೆ. ಸ್ತ್ರೀದೇವತೆ ಜೊತೆಗೆ ಇತರೇ ಪುರುಷ ದೈವಗಳು ಸೃಷ್ಟಿಯಾಗಿರುತ್ತದೆ. ಉದಾಹರಣೆಗೆ ಸೋಮ, ಕಾಮ ಮೊದಲಾದ ದೊಡ್ಡ ಗೊಂಬೆಗಳು ದೇವರ ಸೇವಕರೆಂದು ಹೇಳುತ್ತಾರೆ.

**ಸಿಡಿಯಲ್ಲಿ ಆಧುನಿಕತೆ**

ಜಾತ್ರೆಗಳಲ್ಲಿ ಆಧುನಿಕತೆ ವ್ಯಾಪಕವಾಗುತ್ತಿದ್ದು ಇಂದು ಕುಡಿತ ಕುಣಿತ, ಜೋಜು ಮೋಜು ಹೆಚ್ಚಾಗುತ್ತಿದೆ. ಬರುಬರುತ್ತಾ ಚಕ್ಕಡಿ, ಸೈಕಲ್ ಎಲ್ಲವೂ ಮಾಯವಾಗುತ್ತಾ ಇಂದು ದ್ವಿಚಕ್ರ, ತ್ರಿಚಕ್ರ ವಾಹನ ಮೋಟಾರ್ ವಾಹನಗಳು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬರುತ್ತಿವೆ. ಭಾಗವಹಿಸುವ ಭಕ್ತರಿಗೆ ಒಂದೇ ದಿನದಲ್ಲಿ ಓಡಾಡಲು ಸಾಕಷ್ಟು ಅನುಕೂಲವಿದ್ದು ಬೆಳಿಗ್ಗೆ ಸಾಯಂಕಾಲದೊಳಿಗೆ ಜಾತ್ರೆ ಪೂರೈಸುತ್ತಾರೆ, ವಾರ–ದಿನಗಟ್ಟಲೆ ಪ್ರಯಾಣ ಈಗ ಕೇವಲ ಗಂಟೆಗಳಿಗೆ ಸೀಮಿತವಾಗಿದೆ. ಜಾತ್ರೆಗಳಲ್ಲಿ ಅನೇಕ ಸಿದ್ಧ ಉಡುಪುಗಳ, ಸಿದ್ಧವಸ್ತುಗಳ ಕೊಂಡುಕೊಳ್ಳುವಿಕೆ ಸಾಮಾನ್ಯ ಎನಿಸುತ್ತಿದ್ದು ಹಲವು ಹತ್ತು ರೀತಿಯ ಮಕ್ಕಳ ಆಟಿಕೆಗಳಲ್ಲಿ ಸಾಕಷ್ಟು ಹೊಸತನ ಕಂಡುಬರುತ್ತಿದೆ. ಅಲಂಕಾರಿಕೆ ಗೃಹ ಉಪಯೋಗಿ ಬಳಕೆಗೆ ಸಾಮಗ್ರಿಗಳನ್ನು ಖರೀದಿಸುವ ಭರದ ವ್ಯಾಪಾರ ಭಕ್ತಿ ಇಲ್ಲದಿದ್ದರೂ ಹಣ ಇರಲೇಬೇಕು ಎಂಬುದನ್ನು ಸಾರುತ್ತದೆ. ಅನೇಕ ಬೇಕರಿ ತಿಂಡಿ, ತಿನಿಸುಗಳು ಬಾಟಲಿ ನೀರು ಮೊದಲಾದ ಸಿದ್ಧವಾದ ತಿನಿಸುಗಳು ಎಲ್ಲಕ್ಕೂ ಹೊಸತನ ಕಾಣುತ್ತೇವೆ. ಕೆಲವೊಮ್ಮೆ ಅಸಲಿ ನಕಲಿ ಗುರುತಿಸುವುದು ತೀರ ಕಷ್ಟವಾಗುವಂತೆ ಮಾರುಕಟ್ಟೆಯ ಹಾವಳಿ ಜಾತ್ರೆಯಲ್ಲಿರುತ್ತದೆ.

**ಸರ್ಕಾರಿ ಇಲಾಖೆಗಳ ಸಹಾಯ**

ಆರೋಗ್ಯದಲ್ಲಿ ಇಲಾಖೆಯವರು ಲಸಿಕಾ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದಾರೆ. ಇತ್ತೀಚಿಗೆ ಏಡ್ಸಮ್ಮನ ಜಾತ್ರೆ, ದಡಾರದಮ್ಮ, ಸಿಡುಬಿನಮ್ಮ ಜಾತ್ರೆ ಮೊಡಲಾದ ಭಯಾನಕ ಸಾಂಕ್ರಾಮಿಕ ರೋಗಗಳನ್ನು ದೂರ ಮಾಡಲು ಜಾತ್ರೆಗಳನ್ನು ಆಚರಿಸಲಾಗುತ್ತಿದೆ. ನಮ್ಮ ನಾಗರೀಕ ಪ್ರಜ್ಞೆ ಮೂಡಿಸಲು ಆರೋಗ್ಯ ಇಲಾಖೆ, ಪೋಲೀಸ್ ಇಲಾಖೆ ಶಾಂತಿ ಸುವ್ಯವಸ್ಥೆ ಕಾಪಾಡಲು ಮಿಲಿಟರಿ, ಮೀಸಲು ಪಡೆಗಳನ್ನು ಬಳಸಿಕೊಳ್ಳುತ್ತಿದೆ. ಕೃಷಿ ಇಲಾಖೆ ಕೃಷಿಪ್ರದರ್ಶನ ಕೃಷಿ ಸರಕುಗಳ ಮಾರಾಟ, ಹೆಚ್ಚು ಕುರಿತು ತಿಳುವಳಿಕೆ ನೀಡುವುದುಂಟು. ಅಗ್ನಿ ಶಾಮಕ ಠಾಣೆಯಂತೂ ಜನ ಜಂಗುಳಿಯಿಂದ ಆಗ ಬಹುದಾದ ಬೆಂಕಿ ಅನಾಹುತ ನಿಯಂತ್ರಿಸಲು ಸದಾ ಸಿದ್ಧವಾಗಿರುತ್ತದೆ. "ಹೀಗೆ ಗ್ರಾಮಗಳಲ್ಲಿ ಹೊಡೆದಾಟಗಳಿಂದ ಆಚರಣೆಗಳು ಸ್ಥಗಿತ ಗೊಳ್ಳುತ್ತಿದ್ದು ಕೆಲವೊಮ್ಮೆ ಒಡೆದ ಮನಸ್ಸುಗಳಿಂದ ಯಾವುದೇ ಕಾರ್ಯ ಸುಗಮವಾಗಿ ನಡೆಯದೇ ಹಾಗೆಯೇ ಜಾತ್ರೆ ದೇವತೆ ರಥೋತ್ಸವ ತಾತ್ಕಾಲಿಕ ಸ್ಥಗಿತಗೊಂಡ ಉದಾಹರಣೆಗಳಿವೆ. ಇಡೀ ಗ್ರಾಮವೇ ಬಿಕೋ ಎನ್ನುವಂತೆ ಪರಿಸ್ಥಿತಿಯೇ ಇದೆ." ಇನ್ನು ಕೆಲವಡೆ

ರಾಜಕಾರಣಿಗಳ ಹಸ್ತಕ್ಷೇಪದ ಕಾರಣದಿಂದಾಗಿ ಪಕ್ಷದ ಅಭ್ಯರ್ಥಿಗಳದೇ ವರ್ಚಸ್ಸನ್ನು ತೋರುವುದು ಕಾಣುತ್ತೇವೆ ಮೊದಲನೆಯದಾಗಿ ಜಾತ್ರೆಗಳು ನಡೆಯುವ ದಿನ ಸ್ಥಳ ಕಾರ್ಯಕ್ರಮಗಳ ಪ್ರಚಾರಕ್ಕೆ ಈಗ ಅಬ್ಬರದ ಬ್ಯಾನರ್, ಕಟೌಟ್, ಫ್ಲೆಕ್ಸ್ ಬೋರ್ಡ್ ಹಾಗೂ ಧ್ವನಿ ವರ್ಧಕಗಳ ಮೂಲಕ ಕೂಗು ಮುಗಿಲು ಮುಟ್ಟುತ್ತದೆ. ದಿನ ಪತ್ರಿಕೆಗಳಂತೂ ಪುಟಗಟ್ಟಲೇ ಜಾಹಿರಾತುಗಳು ಕಾಣಿಸಿಕೊಳ್ಳುತ್ತವೆ. ಕರಪತ್ರಗಳು ದೇವಸ್ಥಾನದ ಸಮಿತಿಯವರಿಂದ ಊರೂರಿಗೆ ಅಂಚೆ ಮೂಲಕ ತಲುಪಿಸುವುದು ಹಾಗೂ ವಾಹನಗಳಿಗೆ ಅಂಟಿಸಿರುವುದು ಕಂಡುಬರುತ್ತದೆ. ಹಲವಾರು ಸಾರ್ವಜನಿಕ ಗೋಡೆಬರಹದ ಮೂಲಕ ಸ್ವಾಗತ ಮಾಡುವುದು. ಭಿತ್ತಿಪತ್ರದ ಮೂಲಕ ಊರೂರಿಗೆ ತಲುಪಿಸಲು ಮೊದಲಾದ ವ್ಯವಸ್ಥಿತ ಹೈಟೆಕ್ ಪ್ರಚಾರ ಅಬ್ಬರಕ್ಕೆ ಕೊರತೆಯಿಲ್ಲವಾಗಿದೆ. ಖಾಸಗಿಯಾಗಿ ಫೋನ್, ಎಸ್.ಎಮ್.ಎಸ್ ಮೂಲಕ ಇಡೀ ಪ್ರಪಂಚಾದಾದ್ಯಂತ ಸೂಚನೆಗಳು ವೇಗವಾಗಿ ತಲುಪುತ್ತಿದ್ದು ಹಬ್ಬಕ್ಕಿಂತ ಜಾತ್ರೆಗಳಿಗೆ ವಿಶೇಷ ಮೆರಗು ನೀಡುತ್ತಿವೆ. ಇತ್ತೀಚಿಗೆ ನಾಗರೀಕ ಜಗತ್ತಿನಲ್ಲಿ ಈ ಮೇಲ್ ಮೂಲಕ ಸುದ್ದಿ ಲಭ್ಯವಾಗುವುದುಂಟು. "ರಥೋತ್ಸವಗಳು ವೈಭವವನ್ನು ಕಳೆದುಕೊಳ್ಳುತ್ತ ಚಿಕ್ಕ ಗಾತ್ರದಲ್ಲಿ ಮೂಲೆ ಸೇರಿರುವ ಪ್ರಮೇಯ ಉಂಟು" ಇತ್ತೀಚಿಗೆ ದೇವರುಗಳ ಪಾಲಿಕೆ ಹೊರಲು ಜನರು ಮುಂದೆ ಬಾರದೆ ತಮ್ಮ ನಾಗರೀಕ ಉಡುಪು ಕೊಳೆಯಾಗುತ್ತದೆಂಬ ಶೋಕ ಆವರಿಸಿದೆ.

ಉಚ್ಚಾಯ ಉತ್ಸವಕ್ಕೆ ಎತ್ತಿನಗಾಡಿ(ವಾಹನಗಳನ್ನು) ಬಳಸುವಸ ಮೊದಲಾದ ದಿನಗಳು ದೂರವಿಲ್ಲ. ದೇವಾಲಯಗಳಲ್ಲಿ ಪೂಜೆ ಅಭಿಷೇಕಕ್ಕೆ ನಿಗದಿತ ದರ ಪಾವತಿಸಿ ಕಂಪ್ಯೂಟರ್ ಬಿಲ್ ಪಡೆಯುವ ಪ್ರಸಾದದ ರೂಪದಲ್ಲಿ ಲಡ್ಡು ಉತ್ತತ್ತಿ ಕಲ್ಲು ಸಕ್ಕರೆ ಮೊದಲಾದ ಒಣಪದಾರ್ಥವನ್ನು ಕಾಣುತ್ತೇವೆ. ಎಂದರೆ ಮನೆಯಿಂದ ಭಕ್ತಿ ಪೂರ್ವಕ ಎಡೆ ಮಾಡಿ ಕೊಂಡು ದೇವರಿಗೆ ಅರ್ಪಿಸುವ ಜನರೂ ಕಾಣಸಿಗದಾಗಿದ್ದಾರೆ. ಇಂದು ಜಾತ್ರೆಗಳಲ್ಲಿ ಒಂದೇ ದಿನಕ್ಕೆ ಎಲ್ಲ ಕಾರ್ಯಕ್ರಮಗಳು ಕೊನೆಗೊಳ್ಳುವುದುಂಟು. ಈ ಹಿಂದಿನ ವಾರಗಟ್ಟಲೆ ಆಚರಣೆ ನಿಯಮಗಳು ಮಸಕಾಗುತ್ತ ಒಂದೇ ದಿನದಲ್ಲಿ ರಥೋತ್ಸವ ಓಕುಳಿ ಕಾರ್ತಿಕ ಕೆಂಡೋತ್ಸವ ಹೀಗೆ ನಾನಾ ಕಾರ್ಯಕ್ರಮಗಳು ಜರಗುವುದುಂಟು. ಸಮಯದ ಕಡೆ ಹೆಚ್ಚು ಮಹತ್ವ ನೀಡುತ್ತ ಇಂದು ಬಿಡುವಿಲ್ಲದ ದುಡಿಮೆಗೆ ಅನಿವಾರ್ಯ ಆದೀತು. ದೇವಾಲಯದಲ್ಲಂತು ವಿದ್ಯುತ್ ಯಂತ್ರಗಳ ಮೂಲಕ ಡಮರುಗ ಗಂಟೆ ಜಾಗಟೆ ಪೂಜಾ ವೇಳೆಗೆ ಬಾರಿಸುತ್ತಿರುವ ಆಧುನಿಕ ಸಲಕರಣೆಗಳು ಜನಪ್ರಿಯ ವಾಗುತ್ತಿರುವ ಹಾಗೆ ಸ್ವಚ್ಛತೆ ಕಾಪಾಡುವಲ್ಲಿ ತೊಳೆಯುಲು ಒರಸಲು ಮೊದಲಾದ ಕಡೆ ಯಂತ್ರಗಳ ಬಳಕೆಯಿಂದಾಗಿ, (ಫಿನಾಯಿಲ್ ಬಳಕೆ) ಜನರು ಸೇವೆ ಸಲ್ಲಿಸಲು ಅವಕಾಶವೇ ಸಿಗುತ್ತಿರಲಿಲ್ಲ. ನಗರದಲ್ಲಿ ಪ್ರತೀ ರಸ್ತೆ ರಸ್ತೆಗೆ ನಿರ್ಮಾಣಗೊಂಡಿರುವ ಒತ್ತಡದ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿ ಕಾಣುತ್ತೇವೆ. ಇಲ್ಲಿ ಕೂಡ ಜನತೆ ಮನೆಯಿಂದ ಹೊರಬಾರದೇ ಇರುವುದುಂಟು. ದೂರದ ದೇವಾಲಯಗಳಿಗೆ ಹೋಗದೆ ಮನೆಯಿಂದಲೇ ನೈವೇದ್ಯ ಹಿಡಿಯುವವರು ಹೀಗೆ ನಾನಾ ಆಚರಣೆಗಳು ಪರಿರ್ವತನೆ ಹೊಂದುತ್ತವೆ. ಅರ್ಚಕರ ಮಂತ್ರಗೋಷಣೆ ನಿಂತು ಹೋಗಿ ಬರೀ ಧ್ವನಿವರ್ಧಕಗಳ ಹಾವಳಿ ಹೆಚ್ಚುತ್ತಿದೆ. ದೇವರ ವಿಗ್ರಹಗಳು ಕೂಡ ನಾನಾ ಭಂಗಿಯಲ್ಲಿ ವಸ್ತ್ರ ಪಡವೆ ಧರಿಸಿ ಮೆರೆಯುವುದು ಕಾಣುತ್ತೇವೆ.

**ಜಾನಪದ ಸಾಹಿತ್ಯ ಆಧುನಿಕತೆ**

ಇಂದು ನಶಿಸುತ್ತಿರುವ ಜನಪದ ಸಾಹಿತ್ಯವು ಕ್ಯಾಸೆಟ್ ಸಂಸ್ಕೃತಿಯ ಹಾವಳಿಯಿಂದ ನಲುಗಿ ಹೋಗಿದ್ದು ಜನಪದ ಹಾಡುಗಳು ಜನಪದ ಕಲಾವಿದರು ಕೇವಲ ಮಾಶಾಸನಕ್ಕಾಗಿ ಮಾತ್ರ ಎನ್ನುವಂತಾಗಿದ್ದು ಈಗ ಜನಪದ ಸಾಹಿತ್ಯವನ್ನು ಶಿಷ್ಟಗೊಳಿಸಿ ಧ್ವನಿಮುದ್ರಿಸಿ ಮಾರುಕಟ್ಟೆಗೆ ಪೂರೈಸಿ ಹಣ ನೋಡುವವರಿದ್ದಾರೆ. ಜನಪದ ಸಾಹಿತ್ಯದಲ್ಲೂ ಅನೇಕ ಪರಿವರ್ತನೆಯನ್ನು ಇಲ್ಲೆ ಕಾಣುತ್ತೇವೆ. ದೇವರ ಹಾಡುಗಳು ಭಾವಗೀತೆಗಳಾಗುತ್ತಿರುತ್ತವೆ. ದೈವಭಕ್ತಿಯಿಂದ ಹಾಡುವವರು ಕಡಿಮೆಯಾಗುತ್ತಿದ್ದು ಹಣಕ್ಕಾಗಿ ಆಸೆಪಡುತ್ತಾರೆ. ಜೋಗಪ್ಪ ಜೋಗಮ್ಮ ದ್ವಾರಪ್ಪ ದ್ವಾರಮ್ಮ ದಾಸಪ್ಪ ದಾಸಮ್ಮಗಳು ಉಡುಗೆ ತೊಡುಗೆಗಳಲ್ಲಿ ಬದಲಾವಣೆ ಗಳಾಗುತ್ತಿದ್ದು ಕೆಲವರು ಕುಡಿತಕ್ಕೆ ದಾಸರಾಗುತ್ತಿರುವುದು ಕಂಡುಬರುತ್ತಿದೆ.

**ಜನಪದ ಕಲಾ ಸಾಧನಗಳು ಆಧುನಿಕತೆ** "ಹಿಂದೆ ಚರ್ಮ ವಾದ್ಯಗಳನ್ನು ಹೆಚ್ಚು ಬಳಸುತ್ತಿದ್ದು ಇಂದು ಅದು ಸಂಪೂರ್ಣ ನಶಿಸುತ್ತಿದ್ದು ಆಧುನಿಕ ಫೈಬರ್ ವಾದ್ಯಗಳು ನುಸುಳುತ್ತಿವೆ. ಡೊಳ್ಳು, ತಮಟೆ, ಡ್ರಮ್ ಸೆಟ್‌ಗೆ ಪ್ಲಾಸ್ಟಿಕ್ ಅಥವಾ ಫೈಬರ್ ಅಷ್ಟೇ ಏಕೆ ಊಟಕ್ಕೆ, ಪ್ರಸಾದಕ್ಕೆ ಪ್ಲಾಸ್ಟಿಕ್ ಎಲೆ ಲೋಟ ಚಮಚಗಳನ್ನು ಬಳಸುತ್ತಿರುವುದುಂಟು. ಜನಪದ ಕಲಾವಿದರಂತೂ ಶಿಸ್ತಿಗೊಳಪಟ್ಟು ಸಿಪಾಯಿಗಳಂತೆ ವೇಷಭೂಷಣ ಧರಿಸಿಕೊಂಡು ವಿವಿಧ ಭಂಗಿಗಳಲ್ಲಿ ವೀಡಿಯೋ ಕ್ಯಾಮರಾಗಳಿಗೆ ಪೋಜು ಕೊಡುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿದೆ. ಹೀಗೆ ಧಾರ್ಮಿಕ ಹಿನ್ನಲೆಯುಳ್ಳ ಕಲೆಗಳು ಈಗ ವ್ಯವಹಾರಿಕವಾಗುತ್ತಿದ್ದು ಯಾರಾದರೂ ಜನಪದ ತಂಡ ಕಲಾ ತಂಡ ಕರೆಸಬೇಕಾದರೆ ಹಣ ನೀಡಲೇಬೇಕು. ಜನಪದ ರಂಗಭೂಮಿ, ಹವ್ಯಾಸ ನಾಟಕಗಳಂತೂ ಸಂಪೂರ್ಣ ಕಣ್ಮರೆ ಆಗುತ್ತಿವೆ. ಭಕ್ತಿ ದೂರವಾಗುತ್ತಾ ಕೇವಲ ಸಿನಿಮಾ ಟೆಂಟ್, ಸರ್ಕಸ್, ಹೋಟೆಲ್ ರುಚಿಗಳಿಗಾಗಿ ಜನ ಹೊಂಚು ಹಾಕುವರಾಗಿದ್ದು ಈ ಹಿಂದೆ ಇದ್ದ ಶ್ರದ್ಧೆ–ಭಕ್ತಿಗಳು ಇಲ್ಲವಾಗಿ ಜಾತ್ರೆಗಳಲ್ಲಿ ಜನ ಸೇರಿ ಕುಡಿದು ಕೇಕೆ ಹಾಕಿ ಮಜಾ ಅನುಭವಿಸುವ ಸಂಸ್ಕೃತಿ ಹೆಚ್ಚುತ್ತಿದೆ.

**ವಾಹನ ಸೌಕರ್ಯ:** ಈ ಮೊದಲು ದೂರದೂರಿಗೆ ನಡೆಯುವ ಜಾತ್ರೆಗೆ ಭಾಗವಹಿಸಲು ನಡೆದುಕೊಂಡು ಹೋಗುತ್ತಿದ್ದರು. ಈಗಲೂ ಪಾದಯಾತ್ರೆ ಇಲ್ಲವೆಂದಿಲ್ಲ. ಜಾತ್ರೆಗಳಲ್ಲಿ ಆಧುನೀಕತೆ ವ್ಯಾಪಕವಾಗುತ್ತಿದ್ದು ಇಂದು ಕುಡಿತ ಕುಣಿತ, ಜೋಜು ಮೋಜು ಹೆಚ್ಚಾಗುತ್ತಿದೆ. ನೈಜ ಬರುಬರುತ್ತಾ ಚಕ್ಕಡಿ, ಸೈಕಲ್ ಎಲ್ಲವೂ ಮಾಯವಾಗುತ್ತಾ ಇಂದು ದ್ವಿಚಕ್ರ, ತ್ರಿಚಕ್ರ ವಾಹನ ಮೋಟಾರ್ ವಾಹನಗಳು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸುವ ಭಕ್ತರಿಗೆ ಒಂದೇ ದಿನದಲ್ಲಿ ಓಡಾಡಲು ಸಾಕಷ್ಟು ಅನುಕೂಲವಿದ್ದು ಬೆಳಿಗ್ಗೆ ಸಾಯಂಕಾಲದೊಳಗೆ ಜಾತ್ರೆ ಪೊರೈಸುತ್ತಾರೆ. ವಾರ–ದಿನಗಟ್ಟಲೆ ಪ್ರಯಾಣ ಈಗ ಕೇವಲ ಗಂಟೆಗಳಿಗೆ ಸೀಮಿತವಾಗಿದೆ. ಜಾತ್ರೆಗಳಲ್ಲಿ ಅನೇಕ ಸಿದ್ದ ಉಡುಪುಗಳ, ಸಿದ್ಧವಸ್ತುಗಳ ಕೊಂಡುಕೊಳ್ಳುವಿಕೆ ಸಾಮಾನ್ಯ ಎನಿಸುತ್ತಿದ್ದು ಹಲವು ಹತ್ತು ರೀತಿಯ ಮಕ್ಕಳ ಆಟಿಕೆಗಳಲ್ಲಿ ಸಾಕಷ್ಟು ಹೊಸತನೆ ಕಂಡುಬರುತ್ತಿದೆ. ಅಲಂಕಾರಿಕೆ ಗೃಹೋಪಯೋಗಿ ಬಳಕೆಗೆ ಸಾಮಾಗ್ರಿಗಳನ್ನು ಖರೀದಿಸುವ ಭರದ ವ್ಯಾಪಾರ ಭಕ್ತಿ ಇಲ್ಲದಿದ್ದರೂ ಹಣ ಇರಲೇಬೇಕು ಎಂಬುದನ್ನು ಸಾರುತ್ತದೆ. ಅನೇಕ ಬೇಕರಿ ತಿಂಡಿ, ತಿನಿಸುಗಳು ಬಾಟಲಿ ನೀರು ಮೊದಲಾದ ಸಿದ್ಧವಾದ ತಿನಿಸುಗಳು ಎಲ್ಲಕ್ಕೂ ಹೊಸತನ ಕಾಣುತ್ತೇವೆ. ಕೆಲವೊಮ್ಮೆ ಅಸಲಿ ನಕಲಿ ಗುರುತಿಸುವುದು ತೀರ ಕಷ್ಟವಾಗುವಂತೆ ಮಾರುಕಟ್ಟೆಯ ಹಾವಳಿ ಜಾತ್ರೆಯಲ್ಲಿರುತ್ತದೆ.

**ಉಪಸಂಹಾರ**

ಹೊಸಹೊಸ ಧರ್ಮಗಳು ಉದಯಿಸುತ್ತಿದ್ದು ಅವುಗಳ ಆಡಂಬರ ಹಾಗೂ ಶಿಷ್ಟಾಚಾರದ ಮದ್ಯೆ ತಮ್ಮ ತನವನ್ನೇ ಮರೆಯುತ್ತಿದ್ದು, ಅತ್ತ ಗ್ರಾಮೀಣ ಇತ್ತ ನಾಗರೀಕ ಆಕರ್ಶಣೆ ಇವೆರಡರ ಮಧ್ಯೆ ಜಿಜ್ಞಾಸೆಯಲ್ಲಿರುವಂತೆ ಅಲ್ಲಲ್ಲಿ ಹೆಚ್ಚುತ್ತಿರುವ "ಹೊಸ ದೈವಗಳ ಆಚರಣೆಗೂ ಮನಸ್ಸು ಹರಿದಾಡುತ್ತಿದ್ದು ಜಾತ್ರೆಗಳು ಸಂಪೂರ್ಣ ಆಧುನೀಕರಣಗೊಳ್ಳುತ್ತಾ ಇಡೀ ಸಂಸಾರದೊಂದಿಗೆ ಜಾತ್ರೆಗೆ ಹೋಗುತ್ತಿದ್ದವರು ಈಗ ಯಾರಾದರೂ ಒಬ್ಬರು ಹೋಗಿಬರಬಹುದು ಏಕೆಂದರೆ ಬೆಲೆ ಏರಿಕೆ ಖರ್ಚು ಹೆಚ್ಚಾಗುತ್ತಿರುವುದನ್ನು ವ್ಯವಹಾರಿಕವಾಗಿ ಚಿಂತಿಸುತ್ತಿದ್ದು ಈಡೀ ಕುಟುಂಬ ಪಡುವ ಜಾತ್ರೆಯ ಸಂಭ್ರಮ ಈಗ ದೂರವಾಗಿ ಚಕ್ಕಡಿಗಳು ಸಾಲಾಗಿ ಲಾಟೀನು ನೊಗಕ್ಕೆ ಕಟ್ಟಿಕೊಂಡು ಸಾಮೂಹಿಕ ಆದಾಧನೆ ಜಾತ್ರೆ ಮಾಡುವ ಸಂಬ್ರಮ ಇನ್ನು ಮೇಲೆ ಸಂಪೂರ್ಣ ವಿರುವುದಿಲ್ಲ. ಪಕ್ಕದ ಮನೆ, ಓಣಿ–ಊರಿನ, ದೂರದಲ್ಲಿರೋ ಯಾರಾದರು ಹೋಗಿ ಬರುವವರು ಸಿಕ್ಕರೆ ಅವರ ಕೈಯಲ್ಲೇ ಹಣ್ಣು ಕಾಯಿ ಮಾಡಿಸಿಕೊಂಡು ಬರಲು ಹಣ ಕೊಡುವ ವ್ಯವಸ್ಥೆ ಕಾಣುತ್ತೇವೆ. ತಮ್ಮ ಶಕ್ತಾನುಸಾರ ದೇವರ ಸೇವೆ ಮಾಡುವ, ಹರಕೆ–ನೇವೇದ್ಯ ಅರ್ಪಿಸುವವರು ಕುಳಿತ ಜಾಗದಿಂದಲೇ ಅ ದಿಕ್ಕಿಗೆ ಕೈ ಮುಗಿದು ಸಮಾಧಾನ ಪಡುತ್ತಾರೆ. ಜಾತ್ರೆಗಳೂ ಕೂಡ ಅಷ್ಟೇ ಬದಲಾವಣೆ ಹೊಂದುತ್ತಿದ್ದು ವಾರಗಟ್ಟಲೇ ನಡೆಯುವ ಜಾತ್ರೆಗಳು ಒಂದೇ ದಿನದಲ್ಲಿ ಆಚರಿಸ್ಪಡುತ್ತಿದ್ದು ಇದರಿಂದ ಒಂದು ದಿನದ ಮಟ್ಟಿಗೆ ಅಥವಾ ಒಂದೆರಡು ಗಂಟೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಬರು ಬರುತ್ತಾ ಜಾತ್ರೆಗಳಲ್ಲಿನ ನೂಕು ನುಗ್ಗಲು, ಜನ ಜಂಗುಯಿಂದ ಬೇಸತ್ತು ಬರೀ ದೂರದರ್ಶನದಲ್ಲೋ, ವಿ.ಸಿ. ಡಿ, ಡಿ.ವಿ. ಡಿ. ಮುಖಾಂತರ ನೋಡಿ ಖುಷಿ ಪಟ್ಟು ಕೈಮುಗಿಯುವ ದಿನಗಳೂ ಬರಬಹುದು.

"ಸಮುದಾಯವು ವಾಣಿಜ್ಯ ಸ್ವಭಾವ ಹೊಂದುತ್ತಿದ್ದು ಜಾತ್ರೆಗಳಿಗೆ ಖರ್ಚುಮಾಡದೇ ಇರುವುದು, ಇತ್ತೀಚಿಗೆ ಸುಖ ಶಾಂತಿ ಪಡೆಯುವುದು ದೂರದರ್ಶನ ಮೊದಲಾದ ಮಾಧ್ಯಮಗಳ ಮೂಲಕ ಪಡೆಯುತ್ತಿರುವುದು ಮುಂದೊಂದು ದಿನ ಮಳೆ ಬೆಳೆ ಸಮೃದ್ಧಿಗಾಗಿ ಜಾತ್ರೆ ನಡೆಸುವುದರ ಬದಲು ಈಗ ಹೊಸ ಹೊಸ ಸಾಲ ಯೋಜನೆ ಅಡಿಯಲ್ಲಿ ಹೊಸ ಸಾಲಕ್ಕೆ ದೇವರ ಮೊರೆ ಹೋಗಿ ಹೊಸ ಸಾಲ ಬೇಡುವ ದಿನಗಳಿಗಾಗಿ ಜಾತ್ರೆ ನಡೆಯಬಹುದು." ಬೆಲೆ ಏರಿಕೆಯಿಂದ ಹೊಟ್ಟೆ ತುಂಬಿಸಿಕೊಳ್ಳವವರಿಗೆ ತೊಂದರೆಯಾಗುತ್ತಿದ್ದು ಖರ್ಚು ಮಾಡಲು ಹಿಂದೆ ಮುಂದೆ ನೋಡುತ್ತಿದ್ದರೆ ಸಂಶೋಧನೆಗಳಿಂದ ಬದುಕಿನ ರಹಸ್ಯಗಳು ತಿಳಿಯುತ್ತಿದ್ದು ಇಂದು ಜಾತ್ರೆಗಳು ಹಿಂದಿಗಿಂತ ವೈಭವ ಕಳೆದುಕೊಳ್ಳುತ್ತಿವೆ

**ಸಂದರ್ಭ ಸೂಚಿಗಳು**


1. ಡಾ. ಶಿವಕುಮಾರಸ್ವಾಮಿ, (ಸಂ): ಕರ್ನಾಟಕದ ಜಾತ್ರೆಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಪು–ಸಂ, 248,
2. ರಥಗಳು, ಪು–15, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
3. 'ಡಾ. ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಪು–116, ಅಂಕಿತ ಪ್ರಕಾಶನ, 1997
4. ಡಾ. ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಪು–118, ಅಂಕಿತ ಪ್ರಕಾಶನ, 1997
5. ತುಮಕೂರು ತಾಲ್ಲೂಕಿನ ರಥಗಳು, ಲಲಿತಕಲಾ ಕಾಲೇಜು, ದಾವಣಗೆರೆ.
6. ಡಾ. ರಾಜಶೇಖರ ಹನುಮಲಿ, ವೀರಗಾಸೆ, ಪು–134,
7. ವೆಂಕಟೇಶ್ ಶೆಟ್ಟಿ, (ಸಂ): ತರಳಬಾಳು ಹುಣ್ಣಿಮೆ ಸಂಚಿಕೆ, ಪು–13 ರಾಣೇಬೆನ್ನೂರು ತಾಲೂಕು, 1997